ಆದರೆ, ನೀವು ಇಲ್ಲಿ ಏನು ಹೇಳಿದಿರಿ, ಆತ್ಮಸಾಕ್ಷಿಯಾಗಿ ನಾನು ಒಂದು ಅಕ್ಷರವನ್ನೂ ಬದಲಾವಣೆ ಮಾಡುವುದಿಲ್ಲವೆಂದು ಏನು ಹೇಳಿದಿರಿ, ಅದರ ಪ್ರಕಾರ ನೀವು ಇವತ್ತು ಕೊಡಬೇಕಾಗಿತ್ತು. ಮಾನ್ಯ ಎಂ.ವೈ.ಘೋರ್ಪಡೆ ಯವರು ಇದೇ ಪಂಚಾಯತ್ ಆಕ್ಟ್‌ನ್ನು ನಾವು ಒಪ್ಪಲಿಲ್ಲವೆಂದು ತಿಳಿದುಕೊಂಡು, ಸಚಿವ ಸಂಪುಟದ ವಿರುದ್ದ ಡಿಸೆಂಟ್ ನೋಟ್ ಕೊಟ್ಟು, ಕೊನೆಗೆ ನಾನು ರಾಜೀನಾಮೆ ಕೊಡುತ್ತೇನೆಯೇ ಹೊರತಾಗಿ ಇದಕ್ಕೆ ನಾನು ಒಪ್ಪುವುದಿಲ್ಲವೆಂದು ಹೇಳಿ ಮನೆಗೆ ಹೋದರು. ಅಷ್ಟಾದರೂ ನಿಮ್ಮಲ್ಲಿ ಕಿಂಚಿತ್ ಸ್ವಾಭಿಮಾನ ಇದ್ದರೆ, ರಾಜೀನಾಮೆ ಕೊಡಿ ಎಂದು ನಾನು ಹೇಳಿದೆ. ಅಧ್ಯಕ್ಷರೆ, ಇವರಿಗೆ ಸ್ವಾಭಿಮಾನವೂ ಇಲ್ಲ. ಆಮೇಲೆ ಕಾನೂನನ್ನು ಸರಿಯಾಗಿ ಜಾರಿಯಲ್ಲಿ ತರಬೇಕೆಂದೂ ಇಲ್ಲ. ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕೆಂಬ ದೃಷ್ಟಿಯಿಂದ ಬಂದಿದ್ದರೆ, ಜಿಲ್ಲಾ ಅಧ್ಯಕ್ಷರು ಎಷ್ಟಾಗಿದ್ದಾರೆ, ಅಪೆಕ್ಸ್ ಬೋರ್ಡ್‌ನಲ್ಲಿ ಎಷ್ಟು ಜನ ಅಧ್ಯಕ್ಷರನ್ನು ಮಾಡಿದ್ದೀರಿ. ಎಷ್ಟು ಜನ ಡೈರೆಕ್ಟರನ್ನು ಮಾಡಿದ್ದೀರಿ. ಇದೆಲ್ಲಾ ಇವತ್ತು ಹೊರಕ್ಕೆ ಬರಲಿ. ಅದಕ್ಕೆ ಇದು ಯಾವುದೂ ಕೂಡ ಇಲ್ಲ. ರಾಜಕೀಯ ದುರುದ್ದೇಶದಿಂದ ಕೂಡಿದಂಥ ಈ ಒಂದು ಕಾನೂನು ಇದೆ. ಇಂತಹ ಕರಾಳ ಕಾನೂನಿಗೆ ನಾವೆಲ್ಲರೂ ಕೂಡ ಪ್ರತಿಭಟಿಸುತ್ತೇವೆ. ನಾವು ಎಷ್ಟೇ ಮನವರಿಕೆ ಮಾಡಿಕೊಟ್ಟರೂ ಕೂಡ ಅವರು ಒಪ್ಪುತ್ತಾ ಇಲ್ಲ. ಅದಕ್ಕಾಗಿ ನಾವು ಪ್ರತಿಭಟನೆಯನ್ನು ತೋರಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಸಂದರ್ಭದಲ್ಲಿ ಕಾಂಗ್ರೆಸ್, ಬಿ.ಜೆ.ಪಿ.ರೈತಸಂಘದ ಸದಸ್ಯರು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು : ನಿಲುವಳಿ ಸೂಚನೆಗೆ ಅನುಮತಿ ತಡೆಹಿಡಿಯಲಾಗಿದೆ. ಶೂನ್ಯವೇಳೆಯ ವಿಷಯಗಳನ್ನು ನಾಳೆ ತೆಗೆದುಕೊಳ್ಳೋಣ. ಈಗ ಬೇಡಿಕೆಗಳ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಭೈರೇಗೌಡರು ಶೂನ್ಯವೇಳೆಗೋಸ್ಕರ ಕಾದು ಕುಳುತುಕೊಂಡಿದ್ದಾರೆ. ಆದರೆ ತಮ್ಮ ಸಲಹೆ ಪ್ರಕಾರ, ಶೂನ್ಯವೇಳೆ ವಿಚಾರಗಳನ್ನು ತೆಗೆದುಕೊಳ್ಳುವುದಕ್ಕಿಂತ, ಬೇಡಿಕೆಗಳ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವುದೇ ಬಹಳ ಒಳ್ಳೆಯದು.

8. ವಿತ್ತೀಯ ಕಾರ್ಯಕಲಾಪಗಳು

1999-2000 ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಬೇಡಿಕೆ ಸಂಖ್ಯೆ :	ಬೇಡಿಕೆ ಹೆಸರು :
28	ವೈದ್ಯಕೀಯ ಶಿಕ್ಷಣ
29	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
52	ಸಹಕಾರ
53	ಕ್ರಮಪಡಿಸಿದ ಮಾರುಕಟ್ಟೆಗಳು
54	ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ
55	ಗ್ರಾಮೀಣಾಭಿವೃದ್ಧಿ
26	ವಾರ್ತಾ ಮತ್ತು ಪ್ರಚಾರ
01	ವ್ಯವಸಾಯ
02	ತೋಟಗಾರಿಕೆ